## ವಿ ಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಐವನ್ ಡಿ'ಸೋಜಾ ಇವರ ಗಮನ ಸೆಳೆಯುವ ಸೂಚನೆಗೆ ಉತ್ತರ.

**ವಿಷಯ:-**

**1987 ರಿಂದ 1994 ಮತ್ತು 95ನೇ ಶೈಕ್ಷಣಿಕ ಸಾಲಿನ ಒಳಗೆ ಪ್ರಾರಂಭವಾಗಿರುವ 118 ಶಾಲೆಗಳಿಗೆ ಸೀಮಿತವಾಗಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಆದೇಶವಾಗಿದ್ದರೂ ಅವುಗಳಲ್ಲಿ 7 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸದೇ ಇರುವ ಕುರಿತು ಪ್ರಸ್ತಾಪಿಸಿರುತ್ತಾರೆ.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006, ದಿನಾಂಕ:06.10.2007 ಮತ್ತು ಆದೇಶ ಸಂಖ್ಯೆ:ಇಡಿ 217 ಪಿಎಂಸಿ 2008, ದಿನಾಂಕ:08.09.2008 ರನ್ವಯ 1987 ರಿಂದ 1994-95ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಯುತ್ತಿರುವ ಖಾಸಗಿ ಪ್ರಾಥಮಿಕ/ಪ್ರೌಢ/ಪದವಿಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ದಿನಾಂಕ:01.06.1987 ರಿಂದ 1994-95ನೇ ಶೈಕ್ಷಣಿಕ ಸಾಲಿನ ಒಳಗೆ ಪ್ರಾರಂಭವಾಗಿ ಅನುದಾನಕ್ಕೆ ಒಳಪಡಿಸಲು ಬಾಕಿ ಇರುವ 118 ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು. . ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 33 ವೆಚ್ಚ-8/2022, ದಿನಾಂಕ:12.04.2023 ರಲ್ಲಿ 118 ಶಾಲಾ / ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಕೆಲವೊಂದು ಷರತ್ತಿಗೊಳಪಟ್ಟು ಆರ್ಥಿಕ ಇಲಾಖೆ ಸಹಮತಿ ನೀಡಿರುತ್ತದೆ. ಇವುಗಳಲ್ಲಿ ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹತೆ ಮತ್ತು ಷರತ್ತುಗಳನ್ನು ಪೂರೈಸಿರುವ ಶಾಲಾ/ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಿ ಆದೇಶ ಹೊರಡಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:55648/2016 ಮತ್ತು 58296-58304/2016 ದಿನಾಂಕ:25.04.2017ರಲ್ಲಿ ನೀಡಿರುವ ಆದೇಶವನ್ನು ಆಧರಿಸಿ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 127 ಎಸ್‌ಇಡಬ್ಲೂ 2017, ದಿನಾಂಕ29/06/2017ರಲ್ಲಿ ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಶಾಲೆಗಳನ್ನು ಹೊಸ ಶಾಲೆಗಳೆಂದು ಪರಿಗಣಿಸತಕ್ಕದ್ದು. ಈ ಹಿಂದೆ ನಡೆದಿರುವ ಶೈಕ್ಷಣಿಕ ವರ್ಷವನ್ನು ವೇತನಾನುದಾನದ ಅರ್ಹತೆಗೆ ಪರಿಗಣಿಸತಕ್ಕದ್ದಲ್ಲ ಮತ್ತು ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಶಾಲೆಗಳಿಗೆ ವೇತನಾನುದಾನವನ್ನು ನೀಡತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಸುತ್ತೋಲೆ ಸಂಖ್ಯೆ:ಇಡಿ 127 ಎಸ್‌ಇಡಬ್ಲ್ಯೂ 2017, ದಿನಾಂಕ29/06/2017ರನ್ವಯ ಹಸ್ತಾಂತರ ಮತ್ತು ಸ್ವಾಧೀನಗೊಂಡ ಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಅವಕಾಶವಿಲ್ಲದ ಕಾರಣ 118 ಶಾಲಾ ಕಾಲೇಜುಗಳ ಪಟ್ಟಿಯಲ್ಲಿನ 7 ಪ್ರೌಢಶಾಲೆಗಳನ್ನು ಹಸ್ತಾಂತರ ಮತ್ತು ಸ್ವಾಧೀನ ಕಾರಣದಿಂದಾಗಿ ವೇತನಾನುದಾನಕ್ಕೆ ಒಳಪಡಿಸಲಾಗಿರುವುದಿಲ್ಲ.

**ಸಂಖ್ಯೆ: ಇಪಿ 226 ಎಸ್‌ಇಎಸ್ 2024**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖೆ ಸಚಿವರು**